ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.463/2023**

**PW-1 CW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಗಂಗಮ್ಮ |
| ಗಂಡ | ಃ | ತಿಪ್ಪಣ್ಣ |
| ವಯಸ್ಸು | ಃ | 54 |
| ಉದ್ಯೋಗ | ಃ | ಇಸ್ತ್ರಿ ಮಾಡುವುದು |
| ವಾಸಸ್ಥಳ | ಃ | ಗುಡೆಬಲ್ಲೂರು (ತೆಲಂಗಾಣ) |
| ಪ್ರಮಾಣಿಕರಿಸಿದ ದಿನಾಂಕ | ಃ | **24.10.2025** |

---

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ಚಾಸಾ-4 ನನ್ನ ಮಗ, ಚಾಸಾ-5 ನನ್ನ ಸೊಸೆ. ಚಾಸಾ-2 ಮತ್ತು 3 ಗೊತ್ತು. ಆರೋಪಿತರು ಗೊತ್ತು. ಈಗ ಅಂದಾಜು 2 ವರೆ ವರ್ಷಗಳ ಹಿಂದೆ ನಾನು ನನ್ನ ಮಗ ರಾಜಶೇಖರ ಮತ್ತು ಸೂಸೆ ರೇಖಾ ಎಲ್ಲರೂ ಸೇರಿ ಮೊಮ್ಮಗಳನ್ನು ನೋಡಲು ಸುಂಕೇಶ್ವರಹಾಳಕ್ಕೆ ಹೋಗಿದ್ದೇವು ಆಗ ಆರೋಪಿತರು ಎಲ್ಲರೂ ಸೇರಿಕೊಂಡು ಇಲ್ಲಿಗೆ ಏಕೆ ಬಂದಿರುತ್ತೀರಿ ಅಂತ ನಮ್ಮ ಜೊತೆ ಜಗಳ ತೆಗೆದು ನನಗೆ ಮತ್ತು ನನ್ನ ಮಗ ರಾಜಶೇಖರನಿಗೆ ಮೈತುಂಬ ಚಪ್ಪಲಿಯಿಂದ ಮತ್ತು ಬಡಿಗೆಯಿಂದ ಹೊಡೆದು ಸಾಕಷ್ಟು ನೋವು ಉಂಟು ಮಾಡಿರುತ್ತಾರೆ ಮತ್ತು ಇಲ್ಲಿಗೆ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಅಂತ ಜೀವದ ಬೆದರಿಕೆ ಹಾಕಿರುತ್ತಾರೆ. ಸದರಿ ಘಟನೆ ಮಧ್ಯಾಹ್ನ 2 ರಿಂದ 3 ಗಂಟೆ ಆಗಿತ್ತು. ನಂತರ ಗಬ್ಬೂರು ಸರಕಾರಿ ಆಸ್ಪತ್ರೆಗೆ ಹೋಗಿದ್ದು ಸದರಿ ಆಸ್ಪತ್ರೆಯರು ಹೆಚ್ಚಿನ ಚಿಕಿತ್ಸೆಗೆ ರಾಯಚೂರು ರಿಮ್ಸ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ನನಗೆ ಅತಿಯಾದ ಏಟು ಬಿದಿದ್ದರಿಂದ ನನಗೆ ಒಂದು ವಾರದ ವರೆಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿರುತ್ತಾರೆ. ಆಸ್ಪತ್ರೆಗೆ ಪೋಲಿಸರು ಬಂದು ನನ್ನ ಹೇಳಿಕೆ ದೂರನ್ನು ಬರೆದುಕೊಂಡು ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಚಪ್ಪಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮುಮಾ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ SG (SSP) ವಕೀಲರಿಂದ**

ಕಾಲವಕಾಶವನ್ನು ಕೋರಿರುತ್ತಾರೆ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.